# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 34
2. ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
3. ಉತ್ತರಿಸಬೇಕಾದ ದಿನಾಂಕ : 15.02.2022
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೀದರ್ ಜಿಲ್ಲೆಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಈ ಹಿಂದೆ 32 ಮಳಿಗೆಗಳು ಅನ್ಯ ಚಟುವಟಿಕೆಯಲ್ಲಿ ತೊಡಗಿರುವುದರಿಂದ ಮುಟ್ಟುಗೋಲು ಹಾಕಿಕೊಂಡಿರುವ ನಿವೇಶನಗಳ ಮತ್ತು ಮಳಿಗೆಗಳ ಸಂಖ್ಯೆ ಎಷ್ಟು; ತೆರವುಗೊಳಿಸಲಾದವುಗಳ ಸಂಖ್ಯೆ ಎಷ್ಟು; ಮುಟ್ಟುಗೋಲು ತೆರವುಗೊಳಿಸಿರುವುದಕ್ಕೆ ಸರ್ಕಾರದ ಅನುಮತಿ ಇದೆಯೇ; (ದಾಖಲಾತಿ ಒದಗಿಸುವುದು) | ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ ಒಟ್ಟು 32 ಸಂಖ್ಯೆ ಮಳಿಗೆಗಳನ್ನು ಅಧಿಸೂಚಿತ ಕೃಷಿ ಉತ್ಪನ್ನಗಳಲ್ಲಿ ವ್ಯಾಪಾರ ವಹಿವಾಟು ನಡೆಸದಿರುವ ಕಾರಣಕ್ಕಾಗಿ ದಿನಾಂಕ:27.03.2012ರ ಮಾರುಕಟ್ಟೆ ಸಮಿತಿ ಸಭೆಯ ತೀರ್ಮಾನದನ್ವಯ ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ.<br><br>• 32 ಪೇಟೆಕಾರ್ಯಕರ್ತರ ಪೈಕಿ 09 ಪೇಟೆ ಕಾರ್ಯಕರ್ತರು ಸಮಿತಿಯಿಂದ ಲೈಸೆನ್ಸ್ ಹೊಂದಿ ಅಧಿಸೂಚಿತ ಕೃಷಿ ಉತ್ಪನ್ನಗಳಲ್ಲಿ ವ್ಯವಹರಿಸುತ್ತಿರುವುದರಿಂದ ಮಾರುಕಟ್ಟೆ ಸಮಿತಿಯ ದಿನಾಂಕ:06.01.2014 ರ ಸಭೆಯ ತೀರ್ಮಾನದಂತೆ ಕೃಷಿ ಮಾರಾಟ ಇಲಾಖೆಯು ದಿನಾಂಕ:03.03.2015 ರಲ್ಲಿ ಮುಟ್ಟುಗೋಲು ತೆರವುಗೊಳಿಸಲು ಅನುಮತಿ ನೀಡಿರುತ್ತದೆ. (ಅನುಬಂಧ-1)<br>• ದಿನಾಂಕ:27.11.2017 ರ ಮಾರುಕಟ್ಟೆ ಸಮಿತಿ ಸಭೆಯ ನಿರ್ಣಯದಂತೆ ಉಳಿದ 23 ಪೇಟೆ ಕಾರ್ಯಕರ್ತರ ಪೈಕಿ 05 ಪೇಟೆ ಕಾರ್ಯಕರ್ತರು ಸಮಿತಿಯಿಂದ ಲೈಸೆನ್ಸ್ ಹೊಂದಿ ಅಧಿಸೂಚಿತ ಕೃಷಿ ಉತ್ಪನ್ನಗಳಲ್ಲಿ ವ್ಯವಹರಿಸುತ್ತಿರುವುದರಿಂದ ಸದರಿಯವರಿಗೆ ಹಂಚಿಕೆಯಾದ ಮಳಿಗೆಗಳ ಮುಟ್ಟುಗೋಲನ್ನು ತೆರವುಗೊಳಿಸಲು ದಿನಾಂಕ 06.09.2018 ರಂದು ಕೃಷಿ ಮಾರಾಟ ಇಲಾಖೆಯಿಂದ ಅನುಮತಿ ನೀಡಲಾಗಿರುತ್ತದೆ (ಅನುಬಂಧ-2)<br><br>ಮೇಲ್ಕಂಡಂತೆ ಒಟ್ಟು 14 ಮಳಿಗೆಗಳ ಮುಟ್ಟುಗೋಲನ್ನು ತೆರವುಗೊಳಿಸಲಾಗಿರುತ್ತದೆ. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ-9(2)ರನ್ವಯ ಕೃಷಿ ಮಾರಾಟ ನಿರ್ದೇಶಕರ ಹಂತದಲ್ಲಿಯೇ ಮುಟ್ಟುಗೋಲು ಆದೇಶ ನೀಡಲು ಹಾಗೂ ಹಿಂಪಡೆಯಲು ಅವಕಾಶವಿರುವುದರಿಂದ ಸರ್ಕಾರದ ಗಮನಕ್ಕೆ ತರುವ ಪ್ರಶ್ನೆ ಉದ್ಭವಿಸುವುದಿಲ್ಲ.<br><br>ಯಾವುದೇ ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಂಡಿರುವುದಿಲ್ಲವಾದ್ದರಿಂದ ನಿವೇಶನಗಳ ಮುಟ್ಟುಗೋಲು ಆದೇಶ ತೆರವುಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |

....2

| | | |
|---|---|---|
| ಆ | 2021-22 ನೇ ಸಾಲಿನಲ್ಲಿ ಮೂಲೆ ನಿವೇಶನಗಳು ಅತೀ ಹೆಚ್ಚಿನ ದರದಲ್ಲಿ ಹರಾಜು ಆಗಿದ್ದು, ಅದರ ಮೊತ್ತ ಎಷ್ಟು; ಉಳಿದ 23 ನಿವೇಶನಗಳನ್ನು ಅಧಿಕಾರಿಗಳು ಕಡಿಮೆ ದರದಲ್ಲಿ ಮಾರಾಟ ಮಾಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ ಒಟ್ಟು 6 ಮೂಲೆ ನಿವೇಶನಗಳನ್ನು ಬಹಿರಂಗ ಹರಾಜಿನ ಮೂಲಕ ಪೇಟೆ ಕಾರ್ಯಕರ್ತರಿಗೆ ಹಂಚಿಕೆ ಮಾಡಲು ದಿನಾಂಕ:19.08.2021 ರಂದು ಪ್ರಕಟಣೆ ಹೊರಡಿಸಲಾಗಿದ್ದು, ದಿನಾಂಕ:20.09.2021 ರಂದು ಬಹಿರಂಗ ಹರಾಜು ಪ್ರಕ್ರಿಯೆ ನಡೆದಿರುತ್ತದೆ.<br><br>ಈ 6 ನಿವೇಶನಗಳ ಬಹಿರಂಗ ಹರಾಜಿನ ಒಟ್ಟು ಮೊತ್ತ ರೂ. 4,35,86,000-00 ಆಗಿದ್ದು, ಹಂಚಿಕೆ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>ಉಳಿದ 23 ಮಧ್ಯದ ನಿವೇಶನಗಳು ಸಾಮಾನ್ಯ ನಿವೇಶನಗಳಾಗಿದ್ದು, ಬೀದರ ಸಮಿತಿಯು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣಗಳಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಗಳು 2004ರ ನಿಯಮ-10 ರನ್ವಯ ಪೇಟೆ ಕಾರ್ಯಕರ್ತರಿಗೆ ಜ್ಯೇಷ್ಠತೆಯನ್ನಾಧರಿಸಿ ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆಗೆ ಪ್ರಸ್ತಾವನೆಯನ್ನು ಕೃಷಿ ಮಾರಾಟ ಇಲಾಖೆಗೆ ಸಲ್ಲಿಸಿದ್ದು, ಕೃಷಿ ಮಾರಾಟ ಇಲಾಖೆಯಿಂದ ದಿನಾಂಕ:25.10.2021, 06.11.2021 ಹಾಗೂ 28.01.2022 ರಲ್ಲಿ ಮಂಜೂರಾತಿ ನೀಡಲಾಗಿದೆ.<br><br>ನಿಯಮಾನುಸಾರ ನಿಗಧಿಪಡಿಸಿದ ನಿವೇಶನದ ಬೆಲೆ ಪ್ರತಿ ಚದರ ಅಡಿಗೆ ರೂ.837/- ರಂತೆ ಅರ್ಹ ಪೇಟೆ ಕಾರ್ಯಕರ್ತರಿಗೆ ಹಂಚಿಕೆ ಮಾಡಲಾಗಿರುತ್ತದೆ. ಮಧ್ಯದ (ಸಾಮಾನ್ಯ) ನಿವೇಶನಗಳನ್ನು ಜ್ಯೇಷ್ಠತೆ ಆಧಾರದ ಮೇಲೆ ಹಂಚಿಕೆ ಮಾಡುವಾಗ ಅನುಮೋದಿತ ನಿವೇಶನ ದರದಂತೆ ಹಂಚಿಕೆ ಮಾಡಿರುವುದರಿಂದ ಈ ಪ್ರಕರಣದಲ್ಲಿ ಸಮಿತಿಗೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲವಾದ್ದರಿಂದ ಸರ್ಕಾರದ ಗಮನಕ್ಕೆ ತರುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಇ | ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಪ್ರಾಂಗಣದಲ್ಲಿ ಒಟ್ಟು ಹಂಚಿಕೆಯಾದ ಮಳಿಗೆ ಹಾಗೂ ನಿವೇಶನಗಳ ಸಂಖ್ಯೆ ಎಷ್ಟು; ಸದರಿ ಮಳಿಗೆಗಳು ಯಾವ ಸಾಲಿನಲ್ಲಿ ಹಂಚಿಕೆಯಾಗಿರುತ್ತವೆ; ಸದರಿ ಮಳಿಗೆಗಳನ್ನು ಹಂಚಿಕೆ ಮಾಡುವಾಗ ಪ್ರತಿ ಮಳಿಗೆಗೆ ನಿಗಧಿಪಡಿಸಿದ ಮೊತ್ತ ಎಷ್ಟು; ಸಮಿತಿಗೆ ಭರಣ ಮಾಡಿದ ಮೊತ್ತ ಎಷ್ಟು; | ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಉಪ ಪ್ರಾಂಗಣದಲ್ಲಿನ 38 ಮಳಿಗೆಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣಗಳಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಗಳು 2004ರ ನಿಯಮ-10 ರನ್ವಯ ಕೃಷಿ ಮಾರಾಟ ಇಲಾಖೆಯಿಂದ ದಿನಾಂಕ: 11.08.2016 ರ ಆದೇಶದಲ್ಲಿ ಲೈಸನ್ಸ್ ಹೊಂದಿರುವ ಅರ್ಹ ಪೇಟೆ ಕಾರ್ಯಕರ್ತರಿಗೆ ಹಂಚಿಕೆ ಮಾಡಲು ಮಂಜೂರಾತಿ ನೀಡಲಾಗಿರುತ್ತದೆ (ಅನುಬಂಧ-3).<br><br>ಪ್ರತಿ ಮಳಿಗೆಗೆ ನಿಗದಿಯಾಗಿದ್ದ ಲೀಸ್ ಕಂ ಸೇಲ್ ಮೌಲ್ಯ ರೂ. 13,25,000/- ಗಳಾಗಿದ್ದು 38 ಮಳಿಗೆಗಳ ಒಟ್ಟು ಮೌಲ್ಯ ರೂ. 5,03,50,000-00 ಆಗಿರುತ್ತದೆ. |

| | | |
|---|---|---|
| | ಬಾಕಿ ಉಳಿದ ಮಳಿಗೆಯ ಮೊತ್ತವನ್ನು ಪಡೆಯಲು ನಿಗಧಿಪಡಿಸಿದ ಸಮಯ ಎಷ್ಟು; ಸರ್ಕಾರಕ್ಕೆ ಭರಣ ಮಾಡಿದ ಮೊತ್ತ ಎಷ್ಟು; ಇಲ್ಲವಾದಲ್ಲಿ ಸರ್ಕಾರದಿಂದ ತೆಗೆದುಕೊಂಡಿರುವ ಕ್ರಮ ಏನು? | ಸರ್ಕಾರದ ಆದೇಶ ಸಂಖ್ಯೆ: ಸಇ 510 ಎಂಆರ್‌ಇ 2015 ದಿನಾಂಕ:03.12.2015ರಲ್ಲಿ 6 ತಿಂಗಳ ಒಳಗಾಗಿ ಒಟ್ಟು ಮೌಲ್ಯವನ್ನು ಪಾವತಿಸಿಕೊಳ್ಳಲು ಅನುಮತಿ ನೀಡಲಾಗಿರುತ್ತದೆ.<br><br>ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ದಿನಾಂಕ:26.08.2016 ರ ಪತ್ರದಲ್ಲಿ ಬಾಕಿ ಮೌಲ್ಯವನ್ನು 6 ತಿಂಗಳ ಒಳಗಾಗಿ ಭರಣ ಮಾಡುವ ಷರತ್ತಿಗೊಳಪಟ್ಟು ಮಳಿಗೆಗಳನ್ನು ಪೇಟೆ ಕಾರ್ಯಕರ್ತರ ವಶಕ್ಕೆ ನೀಡಲಾಗಿರುತ್ತದೆ.<br><br>ಮೇಲೆ ತಿಳಿಸಲಾದ ರೂ.5,03,50,000/- ಗಳಲ್ಲಿ ಸಮಿತಿಗೆ ಭರಣ ಮಾಡಿದ ಮೊತ್ತ ರೂ. 2,13,50,000/- ಗಳಾಗಿದ್ದು ಬಾಕಿ ಪಾವತಿಸಬೇಕಾದ ಮೊತ್ತ ರೂ. 2,90,00,000/- ಗಳಾಗಿರುತ್ತದೆ,<br><br>ಬಾಕಿ ಮೊತ್ತವನ್ನು ನಿಗದಿತ ಕಾಲಾವಕಾಶದಲ್ಲಿ ಭರಿಸದೆ ಇರುವುದರಿಂದ 38 ಸಂಖ್ಯೆ ಮಳಿಗೆಗಳಿಗೆ ಪಾವತಿಯಾಗಿದ್ದ ಇ.ಎಂ.ಡಿ ಮೊತ್ತದೊಂದಿಗೆ ಹಂಚಿಕೆ ಮಾಡಲಾದ ಮಳಿಗೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಕೃಷಿ ಮಾರಾಟ ಇಲಾಖೆಯಿಂದ ದಿನಾಂಕ:06.11.2020 ರಂದು ಬೀದರ್ ಸಮಿತಿಗೆ ತಿಳಿಸಲಾಗಿರುತ್ತದೆ.<br><br>ಕೃಷಿ ಮಾರಾಟ ಇಲಾಖೆಯ ಆದೇಶದಂತೆ ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ದಿನಾಂಕ: 28.01.2022 ರಲ್ಲಿ 38 ಪೇಟೆ ಕಾರ್ಯಕರ್ತರಿಗೆ ಹಣ ಮುಟ್ಟುಗೋಲು ಹಾಕಿಕೊಂಡಿರುವ ಬಗ್ಗೆ ತಿಳುವಳಿಕೆ ಪತ್ರವನ್ನು ಜಾರಿ ಮಾಡಿರುತ್ತದೆ.<br><br>ಮುಂದುವರೆದು, ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಉಪ ಪ್ರಾಂಗಣದಲ್ಲಿನ ಒಟ್ಟು 33 ನಿವೇಶನಗಳನ್ನು ಲೀಸ್ ಕಂ ಸೇಲ್ ಆಧಾರದ ಮೇಲೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣಗಳಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಗಳು 2004ರ ನಿಯಮ-10 ರನ್ವಯ ಕೃಷಿ ಮಾರಾಟ ಇಲಾಖೆಯಿಂದ ದಿನಾಂಕ: 25.08.2016 ಮತ್ತು ದಿನಾಂಕ:22.01.2020 ರ ಆದೇಶಗಳಲ್ಲಿ ಲೈಸನ್ಸ್ ಹೊಂದಿರುವ ಅರ್ಹ ಪೇಟೆ ಕಾರ್ಯಕರ್ತರಿಗೆ ಹಂಚಿಕೆ ಮಾಡಲು ಮಂಜೂರಾತಿ ನೀಡಲಾಗಿರುತ್ತದೆ (ಅನುಬಂಧ-4 ಮತ್ತು 5).<br><br>ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ-9(2)ರನ್ವಯ ಕೃಷಿ ಮಾರಾಟ ನಿರ್ದೇಶಕರ ಹಂತದಲ್ಲಿಯೇ ಕ್ರಮ ಕೈಗೊಳ್ಳಲು ಅವಕಾಶವಿರುವುದರಿಂದ, ಸರ್ಕಾರದಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ: ಸಿಒ 25 ಎಂಆರ್‌ಇ 2022

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

ಅನುಬಂಧ - 1

(13)

ಕರ್ನಾಟಕ ಸರ್ಕಾರ
ಕೃಷಿ ಮಾರಾಟ ಇಲಾಖೆ

ಸಂಖ್ಯೆ:ಕಮಾಇ:423:ಅಭಿಕೆ-4:2012

ಕೃಷಿ ಮಾರಾಟ ನಿರ್ದೇಶಕರ ಕಛೇರಿ,
ನಂ.16, 2ನೇ ರಾಜಭವನ ರಸ್ತೆ,
ಪಿ.ಬಿ.ನಂ.5309, ಬೆಂಗಳೂರು-01
ದಿನಾಂಕ:03/03/2015.

ಕಾರ್ಯದರ್ಶಿ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ಬೀದರ್.

ಮಾನ್ಯರೆ,

ವಿಷಯ: ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಲೀಸ್-ಕಂ-ಸೇಲ್ ಆಧಾರದ ಮೇಲೆ ಪೇಟೆಕಾರ್ಯಕರ್ತರಿಗೆ ಹಂಚಿಕೆಯಾದ ನಿವೇಶನ/ಕಟ್ಟಡಗಳನ್ನು ಮುಟ್ಟುಗೋಲು ಹಾಕಿಕೊಂಡಿರುವ ಕುರಿತು.

ಉಲ್ಲೇಖ:1.ದಿ:20/12/2014ರ ನಿಮ್ಮ ಸಮಿತಿಯ ಪತ್ರ ಸಂಖ್ಯೆ:ಕೃಉಮಾಸ:ಬೀದರ್: ಅಭಿಕೆ:1470:2014-15.
2.ದಿ:13/01/2015ರ ಈ ಕಛೇರಿಯ ಇದೇ ಸಮ ಸಂಖ್ಯೆಯ ಪತ್ರ.
3.ದಿ:22/01/2015ರ ನಿಮ್ಮ ಸಮಿತಿಯ ಪತ್ರ ಸಂಖ್ಯೆ:ಕೃಉಮಾಸ:ಬೀದರ್: ಅಭಿಕೆ:1645:2014-15.
4.ದಿ:26/02/2015ರ ಈ ಕಛೇರಿಯ ಇದೇ ಸಮ ಸಂಖ್ಯೆಯ ಪತ್ರ.
5.ಶ್ರೀ.ಈಶ್ವರ ಬಿ. ಖಂಡ್ರೆ, ಶಾಸಕರು, ಭಾಲ್ಕಿ ವಿಧಾನಸಭಾ ಕ್ಷೇತ್ರ ಇವರ ಪತ್ರದ ಮೇಲೆ ಮಾನ್ಯ ಮುಖ್ಯ ಮಂತ್ರಿಯವರ ಪತ್ರ ಸಂಖ್ಯೆ:ಸಿಎಂ: 3450:ಎಂಎಲ್ಎ:2015 ದಿ:21/01/2015.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಲೀಸ್-ಕಂ-ಸೇಲ್ ಆಧಾರದ ಮೇಲೆ ಹಂಚಿಕೆ ಪಡೆದ 32 ಅಂಗಡಿಗಳ ಪೈಕಿ ಈ ಕೆಳಕಂಡ 09 ಅಂಗಡಿಗಳವರು ಲೈಸನ್ಸ್ ಹೊಂದಿದ್ದು, ಅಧಿಸೂಚಿತ ಕೃಷಿ ಉತ್ಪನ್ನಗಳಲ್ಲಿ ವ್ಯಾಪಾರ ವ್ಯವಹಾರ ನಡೆಸುತ್ತಿರುವ ಕಾರಣ ಎಲ್ಲಾ 09 ಲೈಸನ್ಸ್‌ದಾರರ ಮುಟ್ಟುಗೋಲನ್ನು ತೆರವುಗೊಳಿಸಲು ಸೂಚಿಸಿದೆ.

1. ಶಂಕ್ರೆಪ್ಪಾ ಸಿರಿಸಿಗಿ (161)
2. ಸೋಮೇಶ್ವರ ಟ್ರೇಡಿಂಗ್ ಕಂಪನಿ (21)
3. ಡಿ.ಕೆ.ಗುನ್ನಳ್ಳಿ (159)
4. ಪ್ರವೀಣ ಕುಮಾರ ಪಾಟೀಲ ಹೊಕ್ರಾಣಾ (162)
5. ಎಚ್.ವಿ.ಹುಗ್ಗೆ (163)
6. ವೆಂಕಟೇಶ್ವರ ಟ್ರೇಡರ್ಸ (150)
7. ಶಾಮರಾವ ಭೀಮರಾವ (11)
8. ಭಗವಂತ ಔದತಪೂರ (146)
9. ರಾಚಪ್ಪ ಮಟಾಣಗಾರ (181)

ಕ.ಟಿ.ನಿರ್ದೇಶಕರಿಂದ}
ಅನುಮೋದಿತವಾಗಿದೆ}

ತಮ್ಮ ನಂಬುಗೆಯ,

(ಎಂ.ಎ.ನಾಗರಾಜ)
ಹೆಚ್ಚುವರಿ ನಿರ್ದೇಶಕರು(ಯೋಜನೆ)
3.3.15

ಅನುಬಂಧ - 2

(12)

ಕರ್ನಾಟಕ ಸರ್ಕಾರ

ಕೃಷಿ ಮಾರಾಟ ಇಲಾಖೆ

ಸಂಖ್ಯೆ:ಕೃಮಾಇ/433/ಅಧಿಕೆ-4/2012

ಕೃಷಿ ಮಾರಾಟ ನಿರ್ದೇಶಕರ ಕಛೇರಿ,
ನಂ.16, 2ನೇ ರಾಜಭವನ ರಸ್ತೆ,
ಪಿ.ಬಿ.ನಂ.5309, ಬೆಂಗಳೂರು-01,
ದಿನಾಂಕ:06-09-2018.

ಕಾರ್ಯದರ್ಶಿ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ಬೀದರ್.

ಮಾನ್ಯರೆ,

ವಿಷಯ:- ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಲೀಸ್-ಕಂ-ಸೇಲ್ ಆಧಾರದ ಮೇಲೆ ಪೇಟೆಕಾರ್ಯಕರ್ತರಿಗೆ ಹಂಚಿಕೆಯಾದ ನಿವೇಶನ/ ಕಟ್ಟಡಗಳ ಮುಟ್ಟುಗೋಲು ಆದೇಶ ಹಿಂಪಡೆಯುವ ಕುರಿತು.

ಉಲ್ಲೇಖ:-1.ಸಮಿತಿ ಪತ್ರ ಸಂಖ್ಯೆ:ಕೃಉಮಾಸ:ಬೀ:ಅಧಿಕೆ:3080:2017-18, ದಿ:22/11/2017.
2. ಸಮಿತಿ ಪತ್ರ ಸಂಖ್ಯೆ:ಕೃಉಮಾಸ:ಬೀ:ಅಧಿಕೆ:4057:2017-18, ದಿ:12/12/2017.
3. ಬೀದರ್ ಸಮಿತಿ ಪತ್ರ ಸಂಖ್ಯೆ:ಕೃಉಮಾಸ:ಬೀ:ಅಧಿಕೆ:4110:2017-18, ದಿ:22/12/2017.
4. ಈ ಕಛೇರಿಯ ಸಮ ಸಂಖ್ಯೆಯ ಪತ್ರ ದಿ:13/03/2018 ಮತ್ತು ದಿ:22/03/2018.
5. ಜಂಟಿ ನಿರ್ದೇಶಕರು, ಕಾ.ಜಾ.ಕೋ, ಉತ್ತರ ವಲಯ, ಹುಬ್ಬಳ್ಳಿ ಹಾಗೂ ಕಾರ್ಯದರ್ಶಿ, ಹಣ್ಣು ಮತ್ತು ತರಕಾರಿಗಳ (ವಿಶೇಷ) ಕೃಉಮಾಸ, ಬೆಂಗಳೂರು ಇವರ ಜಂಟಿ ಪರಿಶೀಲನಾ ವರದಿ ದಿ:11/06/2018.

*** *** ***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸಮಿತಿ ಪ್ರಸ್ತಾವನೆಗಳಿಗೆ ಜಂಟಿ ಪರಿಶೀಲನಾ ವರದಿ ಪಡೆದು ಪರಿಶೀಲಿಸಲಾಗಿದೆ. ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಲೀಸ್-ಕಂ-ಸೇಲ್ ಆಧಾರದ ಮೇಲೆ ಹಂಚಿಕೆ ಪಡೆದ ಕೆಳಕಂಡ ಪೇಟೆಕಾರ್ಯಕರ್ತರು ಲೈಸನ್ಸ್ ಪಡೆದು ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟು ನಡೆಸುತ್ತಿರುವ ಕಾರಣ ಮಳಿಗೆಗಳ ಮುಟ್ಟುಗೋಲು ತೆರವುಗೊಳಿಸಲು ಸೂಚಿಸಿದೆ.

| ಕ್ರ.ಸಂ | ಅಂಗಡಿ ಹೆಸರು | ಮಳಿಗೆ ಸಂಖ್ಯೆ |
|---|---|---|
| 1 | ಮೆ: ಮಹಾನಂದ ಟ್ರೇಡಿಂಗ್ ಕಂಪನಿ, | 12 |
| 2 | ಮೆ: ಆನಂದ ಎನ್.ಬಿರಾದಾರ್ | 74 |
| 3 | ಶಿವಾನಂದ ಎನ್.ಬಿರಾದಾರ್ | 73 |
| 4 | ಮೆ:ಧ್ಯಾನಮ್ಮ ದೇವಿ ಟ್ರೇಡಿಂಗ್ ಕಂಪನಿ | 190 |

ಮುಂದುವರೆದು ಮಳಿಗೆ ಸಂಖ್ಯೆ:160ರಲ್ಲಿನ ಪೇಟೆಕಾರ್ಯಕರ್ತರಾದ ಮೆ: ಜೆ.ಬಿ ನೌಬಾದೆ ಇವರು ಲೈಸನ್ಸ್ ಪಡೆದು ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟನ್ನು ಮತ್ತೊಂದು ಮಳಿಗೆಯಲ್ಲಿ ನಡೆಸುತ್ತಿದ್ದು ಅದನ್ನು 160ನೇ ಮಳಿಗೆಗೆ ಸ್ಥಳಾಂತರಿಸಿಕೊಂಡು ನಡೆಸುವಂತೆ ಮತ್ತು 160ನೇ ಮಳಿಗೆಯಲ್ಲಿ ಈಗ ನಡೆಸಲಾಗುತ್ತಿರುವ ಕ್ರಿಮಿ ನಾಶಕ ಔಷಧಿಗಳ ವಹಿವಾಟನ್ನು ಸ್ಥಗಿತಗೊಳಿಸುವ ಷರತ್ತಿಗೊಳಪಡಿಸಿ ಮುಟ್ಟುಗೋಲು ಆದೇಶವನ್ನು ತೆರವುಗೊಳಿಸಲು ಸೂಚಿಸಿದೆ.

ತಮ್ಮ ನಂಬುಗೆಯ,

11/09/18

(ಟಿ.ಸಿ.ಗಿರೀಶ)
ಜಂಟಿ ನಿರ್ದೇಶಕರು (ಯೋಜನೆ)

ಕ.ಟಿ.ನಿರ್ದೇಶಕರಿಂದ ಅನುಮೋದಿತವಾಗಿದೆ

ಅನುಬಂಧ -3 (11)

ಕರ್ನಾಟಕ ಸರ್ಕಾರ

ಕೃಷಿ ಮಾರಾಟ ಇಲಾಖೆ

ಕೃಷಿ ಮಾರಾಟ ನಿರ್ದೇಶಕರ ಕಛೇರಿ,
ನಂ.16, 2ನೇ ರಾಜಭವನ ರಸ್ತೆ,
ಪಿ.ಬಿ.ನಂ.5309, ಬೆಂಗಳೂರು-1

ವಿಷಯ:- ಬೀದರ್ ಸಮಿತಿಯ ಹಳ್ಳದಕೇರಿ ಹಣ್ಣು ಮತ್ತು ತರಕಾರಿ ಉಪ ಪ್ರಾಂಗಣದಲ್ಲಿ ನಿರ್ಮಿಸಲಾಗಿರುವ 38 ಮಳಿಗೆಗಳನ್ನು 10 ವರ್ಷಗಳ ಅವಧಿಗೆ ಲೀಸ್-ಕಂ-ಸೇಲ್ ಆಧಾರದ ಮೇಲೆ ಹಂಚಿಕೆ ಮಾಡಲು ಮಂಜೂರಾತಿ ನೀಡುವ ಕುರಿತು.

ಉಲ್ಲೇಖ:-1.ಸರ್ಕಾರದ ಪತ್ರಸಂಖ್ಯೆ:ಸ.ಇ/510/ಎಂ.ಆರ್.ಇ/2015, ದಿ:3-12-2015
2.ಈ ಕಛೇರಿ ಪತ್ರಸಂಖ್ಯೆ:ಕೃಮಾಇ/ಅಭಿವಿ-4/397/2012, ದಿ:11-12-2015
2.ಸಮಿತಿ ಪತ್ರಸಂಖ್ಯೆ:ಕೃಉಮಾಸ/ಬೀ/ನಿವೇಶನ/292/2016-17, ದಿ:30-05-2016
3.ಸಹಾಯಕ ನಿರ್ದೇಶಕರು, ಕೃಮಾಇ, ಬೀದರ್, ಇವರ ಪತ್ರಸಂಖ್ಯೆ: ಸನಿ/ಕೃಮಾಇ/ಬೀ/76/2016-17, ದಿ:4-6-2016
4.ಸಮಿತಿ ಪತ್ರಸಂಖ್ಯೆ:ಕೃಉಮಾಸ/ಬೀ/575/2016-17, ದಿ:26-7-2016

**********

ಆದೇಶ ಸಂಖ್ಯೆ:ಕೃಮಾಇ/ಅಭಿವಿ-4/ಲೀಕಂಸೇ/250/2016, ದಿ: 11 -08-2016

ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ದಿ:25-07-2016ರಂದು ನಡೆದ ಸಭೆಯ ವಿಷಯ ಸಂಖ್ಯೆ:1ರಲ್ಲಿನ ತೀರ್ಮಾನದಂತೆ ಹಳ್ಳದಕೇರಿ ಹಣ್ಣು ಮತ್ತು ತರಕಾರಿ ಉಪ ಪ್ರಾಂಗಣದಲ್ಲಿ ನಿರ್ಮಿಸಲಾಗಿರುವ 38 ಮಳಿಗೆಗಳನ್ನು ಕೆಳಕಂಡ ತರಕಾರಿ ಮತ್ತು ಹಣ್ಣಿನ ವ್ಯಾಪಾರಸ್ಥರಿಗೆ ಪ್ರತಿಯೊಂದು ಮಳಿಗೆಗೆ ಉಲ್ಲೇಖ(1)ರ ಪತ್ರದಲ್ಲಿ ಸರ್ಕಾರವು ನಿಗದಿಪಡಿಸಿರುವ ಮೌಲ್ಯ ರೂ.13.00 ಲಕ್ಷಗಳಂತೆ ಹಾಗೂ ಸದರಿ ಮೌಲ್ಯವನ್ನು 6 ತಿಂಗಳೊಳಗಾಗಿ ಪಾವತಿಸಿ ನೋಂದಣಿ ಮಾಡಿಕೊಳ್ಳುವ ಷರತ್ತು ವಿಧಿಸಿ, ತಪ್ಪಿದಲ್ಲಿ ಮುಟ್ಟುಗೋಲು ಹಾಕಿಕೊಳ್ಳುವ ಷರತ್ತನ್ನು ಪಾಲಿಸಲು ಸೂಚಿಸಿರುವಂತೆ ಕ್ರಮ ವಹಿಸಲು ಆದೇಶಿಸಿ, 10 ವರ್ಷಗಳ ಅವಧಿಗೆ ಲೀಸ್-ಕಂ-ಸೇಲ್ ಆಧಾರದ ಮೇಲೆ ಹಂಚಿಕೆ ಮಾಡಲು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ಮಾರುಕಟ್ಟೆ ಪ್ರಾಂಗಣಗಳಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಗಳು 2004ರ ನಿಯಮ-10 ಮತ್ತು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 9(2)ರನ್ವಯ ಮಂಜೂರಾತಿ ನೀಡಲಾಗಿದೆ.

ತರಕಾರಿ ವ್ಯಾಪಾರಸ್ಥರ ವಿವರ

| ಕ್ರ.ಸಂ | ಪೇಟೆಕಾರ್ಯಕರ್ತರ ಹೆಸರು | ಮಳಿಗೆ ಸಂಖ್ಯೆ |
|---|---|---|
| 1 | ಮೆ/ ಎಂ.ಡಿ.ಜಹುರ್ ವಿಜಿಟೆಬಲ್ ಕಮೀಷನ್ ಎಜೆಂಟ್.ಮಹೆಬೂಬ ಗಂಜ್ ಬೀದರ, ಮಾ/ಎಂ.ಡಿ.ಜಹುರ್ ತಂದೆ ಅಬ್ದುಲ ಅಜೀಜ್, ಬೀದರ | 04 |
| 2 | ಮೆ/ ಅಬ್ದುಲ ರಹೆಮಾನ್ ತರಕಾರಿ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ, ಮಾ/ ಅಬ್ದುಲ್ ರಹೆಮಾನ ತಂದೆ ಅಬ್ದುಲ್ ಅಜೀಜ್, ಬೀದರ | 09 |
| 3 | ಮೆ/ಜನತಾ ವಿಜೇಟೇಬಲ್ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ ಮಾ/ ಅಬ್ದುಲ ಸಲೀಮ್ ತಂದೆ ಅಬ್ದುಲ ಸತ್ತಾರ ಬೀದರ | 11 |
| 4 | ಮೆ/ಎ.ಎಸ್.ಬಿ. & ಕಂಪನಿ, ಮಹೆಬೂಬ ಗಂಜ್ ಬೀದರ ಮಾ/ ಅಬ್ದುಲ ಸತ್ತಾರ ಬೀದರ | 06 |

--2

| | | |
|---|---|---|
| 5 | ಮೆ/ದುರ್ಗಾ ವಿಜಿಟೇಬಲ್ ಕಮೀಷನ್ ಏಜೆಂಟ್ ಮಹೆಬೂಬ ಗಂಜ್ ಬೀದರ, ಮಾ/ ಚಂದ್ರಕಾಂತ ತಂದೆ ವಿಶ್ವನಾಥ ಬೀದರ | 31 |
| 6 | ಮೆ/ಮಹ್ಮದ ರಹೆಮತಲಿ ವಿಜೀಟೇಬಲ್ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ, ಮಾ/ ಮಹ್ಮದ ರಹೆಮತಲಿ ತಂದೆ ಅಕ್ಬರಲಿ ಬೀದರ | 26 |
| 7 | ಮೆ/ ಭಾರತ ಟ್ರೇಡಿಂಗ್ ಕಂಪನಿ ಮಹೆಬೂಬ ಗಂಜ್ ಬೀದರ. ಮಾ/ ಅಬುಲ್ ಹಾಮೆದ್ ತಂದೆ ಅಬ್ದುಲ ಅಜೀಜ್ ಬೀದರ | 30 |
| 8 | ಮೆ/ಅಬ್ದುಲ ಜಲೀಲ್ & ಕಂಪನಿ ಮಹೆಬೂಬ ಗಂಜ್ ಬೀದರ. ಮಾ/ ಅಬ್ದುಲ ಜಲೀಲ್ ತಂದೆ ಅಬ್ದುಲ್ ಕರೀಮ್, ಬೀದರ | 28 |
| 9 | ಮೆ/ಜಿ.ಎನ್.ಕಂಪನಿ ಮಹೆಬೂಬ ಗಂಜ್ ಬೀದರ, ಮಾ/ ಗುಲಾಮನಬಿ ತಂದೆ ಅಬ್ದುಲ್ ಖಯಿಮ್,ಬೀದರ | 33 |
| 10 | ಮೆ/ಎಂ.ಡಿ.ವಾಜಿದ್ & ಕಂಪನಿ ಮಹೆಬೂಬ ಗಂಜ್ ಬೀದರ ಮಾ/ ಎಂ.ಡಿ.ವಜೀದ್ ತಂದೆ ಮಹ್ಮದ ಮುಲ್ತಾನಿ,ಬೀದರ | 25 |
| 11 | ಮೆ/ಎಂ.ಡಿ.ಮಕ್ಬೂಲ್ ತರಕಾರಿ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ, ಮಾ/ ಎಂ.ಡಿ.ಮಕ್ಬೂಲ್ ತಂದೆ ಎಂ.ಡಿ.ಇಸಾಕ್ ಬೀದರ | 23 |
| 12 | ಮೆ/ವಿಷ್ಣು & ಕಂಪನಿ ವಿಜೀಟೇಬಲ್ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ, ಮಾ/ ಚಿದಾನಂದ ಚೆನ್ನಪ್ಪ ಬೀದರ | 29 |
| 13 | ಶ್ರೀ ಸಾಯಿ ಸಾಯಿ ಟ್ರೇಡಿಂಗ್ ಕಂಪನಿ ವಿಜಿಟೆಬಲ್ ಕ ಎ ಮಹೆಬೂಬ ಗಂಜ್ ಬೀದರ, ಮಾ/ ಚಂದ್ರಕಾಂತ ಶಿವರಾಜ ಬೀದರ | 03 |
| 14 | ಮೆ/ಮಲ್ಲಪ್ಪ & ಸನ್ಸ್ ವಿಜಿಟೆಬಲ್ ಮರ್ಚೆಂಟ್ ಮಹೆಬೂಬ ಗಂಜ್ ಬೀದರ ಮಾ/ ಮಲ್ಲಪ್ಪ ತಂದೆ ಗುಂಡಪ್ಪಾ ಬೀದರ | 05 |
| 15 | ಮೆ/ನ್ಯೂ ಸ್ಟಾರ್ ಮದಿನಾ ಟ್ರೇಡರ್ಸ್ ಮಹೆಬೂಬ ಗಂಜ್ ಬೀದರ ಮಾ/ ಮಹ್ಮದ ಜಹುರಹ್ಮದ ತಂದೆ ಜಾಫರ್ ಅಲಿ ಬೀದರ | 07 |
| 16 | ಶ್ರೀ. ಬಸ್ವರಾಜ & ಸನ್ಸ್ ವಿಜಿಟೆಬಲ್ & ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ, ಮಾ/ಬಸ್ವರಾಜ ಗುಂಡಪ್ಪ ಬೀದರ | 08 |
| 17 | ಮೆ/ಫಾಯಿವ್ ಸ್ಟಾರ್ ವಿಜೀಟೇಬಲ್ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ, ಮಾ/ ಮಹ್ಮದ ಲೈಖ್ ತಂದೆ ಎಂ.ಡಿ.ಸಲೀಮ್, ಬೀದರ | 10 |
| 18 | ಮೆ/ಸಾಯಿಬಾಬಾ & ಕಂಪನಿ ವಿಜಿಟೇಬಲ್ ಕ ಎ ಮಹೆಬೂಬ ಗಂಜ್ ಬೀದರ, ಮಾ/ ಅಬ್ದುಲ ಅಜೀಜ್ ತಂದೆ ಹನ್ನುಮಿಯ್ಯಾ ಬೀದರ | 20 |
| 19 | ಮೆ/ಮಹ್ಮದ ಮೋಹಿಯೋ ದ್ದಿನ್ ವಿಜೀಟೇಬಲ್ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ, ಮಾ/ ಅಬ್ದುಲ್ ರಫೀಕ್ ತಂದೆ ಅಬ್ದುಲ್ ಮೊಹಿಯೋದ್ದಿನ ಬೀದರ. | 22 |
| 20 | ಮೆ/ಬಿ.ಆರ್.ಸಿ. ಟ್ರೇಡರ್ಸ್ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ ಮಾ/ ಇರಫಾನ್ ಬಾಬಾ ತಂದೆ ರಹೀಮ್ ಸಾಬ ಬೀದರ | 19 |

--3

| | | |
|---|---|---|
| 21 | ಮೆ/ಎಕ್ಯೂಸಿ & ಬ್ರದರ್ಸ್ ವಿಜೇಟೇಬಲ್ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ, ಮಾ/ ಅಬ್ದುಲ್ ಖಯೀಮ್ ತಂದೆ ಅಬ್ದುಲ್ ರಹೀಮ್ ಬೀದರ | 15 |
| 22 | ಮೆ/ವಾಯ್.ಎಸ್.ಟ್ರೇಡಿಂಗ್ ಕಂಪನಿ. ತರಕಾರಿ ಕ ಎ ಮಹೆಬೂಬ ಗಂಜ್ ಬೀದರ, ಮಾ/ ಮಹ್ಮದ ಯುನುಸ್ ತಂದೆ ಅಬ್ದುಲ್ ರಹೀಮ್ ಬೀದರ | 14 |
| 23 | ಮೆ/ಎ.ಎ.ಕಂ ವಿಜೇಟೇಬಲ್ ಕಮಿಷನ್ ಎಜೆಂಟ್ ಮಹೆಬೂಬ ಗಂಜ್ ಮಾ/ ಮಹ್ಮದ ಆಹಮದಲಿ ತಂದೆ ಮಹ್ಮದ ಇಸಾಮಿಯ್ಯಾ ಬೀದರ | 13 |
| 24 | ಮೆ/ಎಂ.ಡಿ.& ಸನ್ಸ್ ಟ್ರೇಡಿಂಗ್ ಕಂ ವಿಜಿಟೆಬಲ್ ಕ ಎ ಮಹೆಬೂಬ ಗಂಜ್ ಬೀದರ್, ಮಾ/ಬಾಬಾ ತಾಜೋದ್ದಿನ್ ತಂದೆ ಮಹ್ಮದ ಮೈನೋದ್ದಿನ್ ಬೀದರ | 12 |
| 25 | ಮೆ/ಮಹ್ಮದ & ಸನ್ಸ್ ತರಕಾರಿ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ, ಮಾ/ ಮಹ್ಮದ ಸಲಾವೂದ್ದಿನ್ ತಂದೆ ಮಹ್ಮದ ಮೈನೋದ್ದಿನ್ ಬೀದರ | 24 |
| 26 | ಮೆ/ಎ.ಝಡ್.& ಕಂಪನಿ ಮಹೆಬೂಬ ಗಂಜ್ ಬೀದರ ಮಾ/ ಅಬ್ದುಲ ಅಜೀಜ್ ತಂದೆ ಮಹ್ಮದ ಗೌಸೋದ್ದಿನ್,ಬೀದರ | 21 |
| 27 | ಮೆ/ಎಂಜೆ..ಸಿ. & ಬ್ರದರ್ಸ್ ಮಹೆಬೂಬ ಗಂಜ್ ಬೀದರ ಮಾ/ ಎಂ.ಡಿ.ಜುನೇದ್ ತಂದೆ ಅಬ್ದುಲ್ ಅಜೀಜ್ ಬೀದರ | 27 |
| 28 | ಮೆ/ಅಬ್ದುಲ ರಸೀದ್ ವಿಜೇಟೇಬಲ್ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ, ಮಾ/ ಅಬ್ದುಲ ರಸೀದ್ ತಂದೆ ಅಬ್ದುಲ್ ಕರೀಮ್, ಬೀದರ | 01 |
| 29 | ಮೆ/ಎಚ್.ಎಂ.ಕಂಪನಿ ವಿಜೇಟೇಬಲ್ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ್, ಮಾ/ ಎಂ.ಡಿ.ಹನ್ನುಮಿಯ್ಯ ತಂದೆ ಮುಜಾಫರ ಸಾಬ ಬೀದರ | 02 |
| 30 | ಮೆ/ಫ್ರೀನ್ಸ್ ವಿಜೇಟೇಬಲ್ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ, ಮಾ/ ಮಹ್ಮದ ಅಬ್ದುಲ್ ರಫೀಕ್ ತಂದೆ ಅಬ್ದುಲ್ ಲತೀಫ್ | 32 |

## ಹಣ್ಣಿನ ವ್ಯಾಪಾರಸ್ಥರ ವಿವರ

| ಕ್ರ.ಸಂ | ಪೇಟಕಾರ್ಯಕರ್ತರ ಹೆಸರು | ಮಳಿಗೆ ಸಂಖ್ಯೆ |
|---|---|---|
| 1 | ಮೆ/ಎಂ.ಡಿ.ಎಕ್ಬಾಲ್ & ಕಂಪನಿ ಫ್ರುಟ್ ಕಮೀಷನ್ ಎಜೆಂಟ್ ಸಿಂಗಾರಬಾಗ ರೋಡ ಬೀದರ ಮಾ/ ಎಂ.ಡಿ.ಎಕ್ಬಾಲ್ ತಂದೆ ಎಂ.ಡಿ.ಎಕೂಬ್, ಬೀದರ | 34 |
| 2 | ಮೆ/ಎಂ.ಡಿ.ನಾಸಿರ್ & ಬ್ರದರ್ಸ್ ಫ್ರುಟ್ ಕ ಎ ಸಿಂಗಾರಬಾಗ ಬೀದರ, ಮಾ/ ಮಹ್ಮದ ನಾಸಿರ್ ತಂದೆ ತಂದೆ ಎಕ್ಬಾಲ್, ಬೀದರ | 35 |
| 3 | ಮೆ/ನ್ಯೂ ರಾಯಲ್ ಫ್ರುಟ್ ಕಮೀಷನ್ ಎಜೆಂಟ್ ಸಿಂಗಾರಬಾಗ ರೋಡ ಬೀದರ, ಮಾ/ ಮಹ್ಮದ ಮಜರೋದ್ದಿನ್ ತಂದೆ ಶೇಕ್ ಫರಿದೋದ್ದಿನ್ ಬೀದರ | 36 |
| 4 | ಮೆ/ಮಹ್ಮದ ಮುಜುಮುಲ ಅಹ್ಮದ ಫ್ರುಟ್ ಕ ಎ ಸಿಂಗಾರಬಾಗ ಬೀದರ ಮಾ/ಮಹ್ಮದ ಮಜುಮಲ ತಂದೆ ಫತ್ತೆ ಅಹ್ಮದ | 37 |
| 5 | ಮೆ/ಕೆ.ಜಿ.ಎನ್. ಫ್ರೂಟ್ ಕಮೀಷನ್ ಎಜೆಂಟ್ ಸಿಂಗಾರಬಾಗ ಬೀದರ, ಮಾ/ ಅಬ್ದುಲ್ ಖಯೀಮ್ ತಂದೆ ಶಬ್ಬಿರ ಅಲಿ ಬೀದರ | 38 |
| 6 | ಮೆ/ಮಹ್ಮದ ಜಮಿಲ್ ಅಹ್ಮದ ಫ್ರೂಟ್ ಕಮೀಷನ್ ಎಜೆಂಟ್ ಸಿಂಗಾರಬಾಗ ಬೀದರ ಮಾ/ ಮಹ್ಮದ ಜಮಿಲ್ ಅಹ್ಮದ ತಂದೆ ಬಸೀರ್ ಅಹ್ಮದ ಬೀದರ | 39 |

| | | |
|---|---|---|
| 7 | ಮೆ/ಅಲಹಜ್ ಶೆಕ್ ಅಹ್ಮದ ಫ್ರೂಟ್ ಕಮೀಷನ್ ಎಜೆಂಟ್ ಸಿಂಗಾರಬಾಗ ಮಾ/ಶೆಕ್ ಅಹ್ಮದ ತಂದೆ ಅಬ್ದುಲ್ ರಹೆಮಾನ್ ಬೀದರ | 40 |
| 8 | ಮೆ/ಮದಿನಾ ಫ್ರೂಟ್ ಕಮೀಷನ್ ಎಜೆಂಟ್ ಸಿಂಗಾರಬಾಗ ಬೀದರ ಮಾ/ ಮಹ್ಮದ ಪಕೀರ್ ಪಾಶಾ ತಂದೆ ಮಹ್ಮದ ಮುಲ್ತಾನಿ ಬೀದರ | 41 |

ಕ.ಟಿ. ನಿರ್ದೇಶಕರಿಂದ ಅನುಮೋದಿತವಾಗಿದೆ.

(ಎಂ.ಎ.ನಾಗರಾಜ)
ಹೆಚ್ಚುವರಿ ನಿರ್ದೇಶಕರು(ಯೋಜನೆ)

1. ಅಧ್ಯಕ್ಷರು/ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೀದರ್.
2. ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೀದರ್ ಜಿಲ್ಲೆ, ಬೀದರ್.
3. ಕಛೇರಿ ಪ್ರತಿ.

ಅನುಬಂಧ - H (7)

ಕರ್ನಾಟಕ ಸರ್ಕಾರ

ಕೃಷಿ ಮಾರಾಟ ಇಲಾಖೆ

ಕೃಷಿ ಮಾರಾಟ ನಿರ್ದೇಶಕರ ಕಛೇರಿ,
ನಂ. 16, 11ನೇ ರಾಜಭವನ ರಸ್ತೆ,
ಪಿ.ಬಿ.ನಂ.5309, ಬೆಂಗಳೂರು-01.

ವಿಷಯ:- ಸಮಿತಿಯ ಹಳ್ಳದಕೇರಿ ಹಣ್ಣು ಮತ್ತು ತರಕಾರಿ ಉಪ ಪ್ರಾಂಗಣದಲ್ಲಿ ನಿರ್ಮಿಸಲಾಗಿರುವ ವಿವಿಧ ಅಳತೆಯ ಖಾಲಿ ನಿವೇಶನಗಳನ್ನು ಲೀಸ್-ಕಂ-ಸೇಲ್ ಆಧಾರದ ಮೇಲೆ ಹಂಚಿಕೆ ಮಾಡುವ ಕುರಿತು.

ಉಲ್ಲೇಖ:- ಸಮಿತಿಯ ಪತ್ರ ಸಂಖ್ಯೆ:ಕೃಉಮಾಸ:ಬೀ:ನಿವೇಶನ:676:2016-17, ದಿ:11/08/2016.

*** *** ***

<u>ಆದೇಶ ಸಂಖ್ಯೆ:ಕೃಮಾಇ/ಅಧಿಕೆ-4/ಲೀಕಂಸೇ/250/2016, ದಿನಾಂಕ: [illegible]-08-2016</u>

ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ದಿ:10-08-2016 ರಂದು ನಡೆದ ಸಭೆಯ ವಿಷಯ ಸಂಖ್ಯೆ:1ರಲ್ಲಿನ ತೀರ್ಮಾನದಂತೆ, ಹಳ್ಳದಕೇರಿ ಹಣ್ಣು ಮತ್ತು ತರಕಾರಿ ಉಪ ಪ್ರಾಂಗಣದಲ್ಲಿ ನಿರ್ಮಿಸಲಾಗಿರುವ ವಿವಿಧ ಅಳತೆಯ ನಿವೇಶನಗಳನ್ನು ಪ್ರತಿ ಚದರ ಅಡಿಗೆ ರೂ.400/-ರಂತೆ ಕೆಳಕಂಡ ಪೇಟೆಕಾರ್ಯಕರ್ತರುಗಳಿಗೆ 10 ವರ್ಷಗಳ ಲೀಸ್-ಕಂ-ಸೇಲ್ ಆಧಾರದ ಮೇಲೆ ಸಮಿತಿಯು ನಿಯಮಾನುಸಾರ ವಿಧಿಸುವ ನಿಬಂಧನೆ ಹಾಗೂ ಷರತ್ತಿಗೊಳಪಟ್ಟು ಹಂಚಿಕೆ ಮಾಡಲು ಆಸ್ತಿ ಹಂಚಿಕೆ ನಿಯಮಾವಳಿ-2004ರ ನಿಯಮ-10ರನ್ವಯ ಹಾಗೂ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 9(2)ರಡಿಯಲ್ಲಿ ಮಂಜೂರಾತಿ ನೀಡಲಾಗಿದೆ.

| ಕ್ರ.ಸಂ. | ಪೇಟೆಕಾರ್ಯಕರ್ತರ ಹೆಸರು | ನಿವೇಶನ ಸಂಖ್ಯೆ |
|---|---|---|
| 1 | ಮೆ/ನ್ಯೂ ಇಂಡಿಯಾ ಕಂಪನಿ ವಿಜೀಟೇಬಲ್ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ, ಮಾ/ ಮಹ್ಮದ ಪಾಶಾಮಿಯ್ಯ ತಂದೆ ಅಬ್ದುಲ್ ಗಫುರಸಾಬ್ | 16 |
| 2 | ಮೆ/ಎನ್.ಎ.ಬ್ರದರ್ಸ್, ಮಾ/ಎಂ.ಡಿ.ನೂರಹ್ಮದ ತಂದೆ ಎಂ.ಡಿ.ಇಬ್ರಾಹಿಂಸಾಬ ಬೀದರ | 17 |
| 3 | ಮೆ/ಎ.ಎಲ್.ಸಿ. & ಬ್ರದರ್ಸ್ ವಿಜಿಟೆಬಲ್ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ ಮಾ/ ಅಬ್ದುಲ್ ಸಲೀಮ್ ತಂದೆ ಅಬ್ದುಲ್ ಅಹ್ಮದಲಿ ಬೀದರ | 18 |
| 4 | ಮೆ/ಮಹ್ಮದ ಖುದ್ದುಸ್ ವಿಜೀಟೇಬಲ್ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ, ಮಾ/ ಮಹ್ಮದ ಖುದುಸ್ ಮಹ್ಮದ ಅಕ್ಬರಲಿ ಬೀದರ | 42 |
| 5 | ಮೆ/ಮಹ್ಮದ ಮಜರ & ಬ್ರದರ್ಸ್ ವಿಜಿಟೆಬಲ್ ಕ ಎ ಬೀದರ ಮಾ/ಮಹ್ಮದ ಮಜರಲಿ ತಂದೆ ಮಹ್ಮದ ಜಾಫರಲಿ ಬೀದರ | 43 |
| 6 | ಮೆ/ಮಹ್ಮದಲಿ & ಸನ್ಸ್ ತರಕಾರಿ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ, ಮಾ/ ಮಹ್ಮದಲಿ ತಂದೆ ಅಬ್ದುಲ ಹಮೀದ್ ಬೀದರ | 44 |

...2)

| | | |
|---|---|---|
| 7 | ಮೆ/ತವಕಲ್ ವಿಜೆಟೇಬಲ್ ಕಮೀಷನ್ ಎಜೆಂಟ್ ಮಹೆಬೂಬ ಗಂಜ್ ಬೀದರ, ಮಾ/ ಅಬ್ದುಲ ನೂರಲಿ ತಂದೆ ಮಹ್ಮದ ಮೈನೋದ್ದಿನ್ ಬೀದರ | 45 |
| 8 | ಮೆ/ಬಾಬಾಸಾಹೇಬ್ ಅಂಬೇಡ್ಕಾರ್ ಟ್ರೇಡಿಂಗ್ ಕಂ ಮಹೆಬೂಬ ಗಂಜ್ ಮಾ/ಶಿವಕುಮಾರ ಪಾಂಡುರಂಗ ನಾವದಗೇರಿ, ಬೀದರ (ಪ.ಜಾ) | 46 |
| 9 | ಮೆ/ಭೋಮಗೊಂಡೇಶ್ವರ ವಿಜಿಟೆಬಲ್ ಕಮೀಷನ್ ಎಜೆಂಟ್ ಹಳ್ಳದಕೇರಿ ಹೈದ್ರಾಬಾದ ರೊಡ ಬೀದರ, ಮಾ/ಶಿವಕುಮಾರ ತಂದೆ ವೈಜಿನಾಥ ಬೀದರ (ಪ.ಪಂಗಡ) | 47 |
| 10 | ಮೆ/ಲಕ್ಷ್ಮಣ ನಂದಗಾಂವ್ & ಕಂಪನಿ ಮಹೆಬೂಬ ಗಂಜ್ ಬೀದರ ಮಾ/ಲಕ್ಷ್ಮಣ ತಂದೆ ಝುರೇಪ್ಪಾ ಬೀದರ (ಪ.ಪಂಗಡ) | 48 |

ಕ.ಟಿ.ನಿರ್ದೇಶಕರಿಂದ ಅನುಮೋದಿತವಾಗಿದೆ.

(ಎಂ.ವಿ.ನಾಗರಾಜ)
ಹೆಚ್ಚುವರಿ ನಿರ್ದೇಶಕರು (ಯೋಜನೆ)

1. ಅಧ್ಯಕ್ಷರು/ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೀದರ್.
2. ಕಛೇರಿ ಪ್ರತಿ.

25/8/16

Recd 25/8/16

ದಿ: 16/09/16

ಅನುಬಂಧ-5 (5)


**ಕೃಷಿ ಮಾರಾಟ ಇಲಾಖೆ**

ಕೃಷಿ ಮಾರಾಟ ನಿರ್ದೇಶಕರ ಕಚೇರಿ, ನಂ:16, 2ನೇ ರಾಜಭವನ ರಸ್ತೆ, ಪಿ.ಬಿ.ನಂ.5309,

ಬೆಂಗಳೂರು-01, ಇ-ಮೇಲ್ **bnqdam@kar.nic.in**, ದೂ:080-22867840, Fax-080-22864375


---

ವಿಷಯ:-ಬೀದರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಹಳ್ಳದಕೇರಿ ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಉಪ ಪ್ರಾಂಗಣದಲ್ಲಿನ ಹೊಸದಾಗಿ ರೂಪಿಸಿದ 23 ಸಂಖ್ಯೆ ವಿವಿಧ ಅಳತೆಯ ಸಾಮಾನ್ಯ ನಿವೇಶನಗಳನ್ನು ಅರ್ಹ ಪೇಟೆ ಕಾರ್ಯಕರ್ತರಿಗೆ 10 ವರ್ಷಗಳ ಅವಧಿಗೆ ಲೀಸ್- ಕಂ-ಸೇಲ್ ಆಧಾರದ ಮೇಲೆ ಹಂಚಿಕೆ ಮಾಡುವ ಕುರಿತು.

ಉಲ್ಲೇಖ:1. ಕಾರ್ಯದರ್ಶಿ, ಕೃಉಮಾಸ, ಬೀದರ್ ಇವರ ಪತ್ರ ಸಂಖ್ಯೆ:ಕೃಉಮಾಸ /ಬೀ/ನಿವೇಶನ/205/2019-20, ದಿನಾಂಕ:03.06.2019.

2. ಈ ಕಛೇರಿಯ ಸಮ ಸಂಖ್ಯೆಯ ಪತ್ರ ದಿನಾಂಕ:29.06.2019.
3. ಕಾರ್ಯದರ್ಶಿ, ಕೃಉಮಾಸ, ಬೀದರ್ ಇವರ ಪತ್ರ ಸಂಖ್ಯೆ:ಕೃಉಮಾಸ: /ಬೀ/ಅಭಿಕೆ/573/2019-20, ದಿನಾಂಕ:23.09.2019
4. ಕಾರ್ಯದರ್ಶಿ, ಕೃಉಮಾಸ, ಬೀದರ್ ಇವರ ಪತ್ರ ಸಂಖ್ಯೆ:ಕೃಉಮಾಸ /ಬೀ/ಅಭಿಕೆ/1043/2019-20, ದಿನಾಂಕ:18.01.2020.

*** *** ***

**ಆದೇಶ ಸಂಖ್ಯೆ:ಕೃಮಾಇ/ಅಭಿಕೆ-4/ಲೀಕಂಸೇ/110/2019, ದಿನಾಂಕ21.01.2020**

ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ದಿ:03.09.2019ರಂದು ನಡೆದ ಸಭೆಯ ವಿಷಯ ಸಂಖ್ಯೆ:5ರಲ್ಲಿನ ತೀರ್ಮಾನದಂತೆ, ಹಳ್ಳದಕೇರಿ ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಉಪ ಪ್ರಾಂಗಣದಲ್ಲಿನ ಹೊಸದಾಗಿ ರೂಪಿಸಿದ 23 ಸಂಖ್ಯೆ ವಿವಿಧ ಅಳತೆಯ ಸಾಮಾನ್ಯ ನಿವೇಶನಗಳನ್ನು ಪ್ರತೀ ಚದರಡಿಗೆ ರೂ.400/-ರಂತೆ ಕೆಳಕಂಡ ಪೇಟೆಕಾರ್ಯಕರ್ತರಿಗೆ 10 ವರ್ಷಗಳ ಲೀಸ್-ಕಂ-ಸೇಲ್ ಆಧಾರದ ಮೇಲೆ ಸಮಿತಿಯು ನಿಯಮಾನುಸಾರ ವಿಧಿಸುವ ನಿಬಂಧನೆ ಹಾಗೂ ಷರತ್ತಿಗೊಳಪಟ್ಟು ಹಂಚಿಕೆ ಮಾಡಲು ಆಸ್ತಿ ಹಂಚಿಕೆ ನಿಯಮಾವಳಿ-2004ರ ನಿಯಮ-10ರನ್ವಯ ಹಾಗೂ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 9(2)ರಡಿಯಲ್ಲಿ ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ. | ಪೇಟೆಕಾರ್ಯಕರ್ತರ ಹೆಸರು | ಹಂಚಿಕೆಗೆ ಪರಿಗಣಿಸಿದ ನಿವೇಶನ ಸಂಖ್ಯೆ: |
|---|---|---|
| 1 | ಮೆ/ಓ.ಎಸ್.ತರಕಾರಿ ಕಮೀಷನ್ ಏಜೆಂಟ್ ಬೀದರ | 69 |
| 2 | ಮೆ/ಅಬ್ದುಲ ಖದೀರ ತರಕಾರಿ ಕಮೀಷನ್ ಏಜೆಂಟ್ ಬೀದರ | 65 |
| 3 | ಮೆ/ವೀರಭದ್ರೇಶ್ವರ ಟ್ರೇಡಿಂಗ್ ಕಂಪನಿ, ತರಕಾರಿ ಕಮೀಷನ್ ಏಜೆಂಟ್ ಬೀದರ | 66 |
| 4 | ಮೆ/ಅಬ್ದುಲ ರೌಫ್ & ಬ್ರದರ್ಸ್ ಬೀದರ | 63 |
| 5 | ಮೆ/ಸ್ವಾರ ಫ್ರೂಟ್ ಕಮೀಷನ್ ಏಜೆಂಟ್, ಬೀದರ (ಫ್ರುಟ್) | 55 |
| 6 | ಮೆ/ಎಂ.ಡಿ.ಖೀಜರ್ ಫ್ರೂಟ್ಸ್ ಸಪ್ಲಾಯರ್ಸ್, ಬೀದರ (ಫ್ರುಟ್) | 54 |
| 7 | ಮೆ/ಮೈನೋದ್ದಿನ್ ಟ್ರೇ. ಕಂಪನಿ. ಫ್ರುಟ್ ಕಮೀಷನ್ ಏಜೆಂಟ್ ಬೀದರ (ಫ್ರುಟ್) | 52 |
| 8 | ಮೆ/ಮಹ್ಮದ ಶಾಕೀರ್ ಫ್ರೂಟ್ಸ್ ಕಮೀಷನ್ ಏಜೆಂಟ್ ಬೀದರ (ಫ್ರುಟ್) | 58 |

| | | |
|---|---|---|
| 9 | ಮೆ/ಎಂ.ಆಯ್.ಬಿ. ವಿಜಿಟೆಬಲ್ ಕಮೀಷನ್ ಎಜೆಂಟ್ ಬೀದರ | 62 |
| 10 | ಮೆ/ಬಡಿ ಎಜಮಾಖಾನ ಫ್ರೂಟ್ ಕಮೀಷನ್ ಎಜೆಂಟ್ ಬೀದರ (ಫ್ರುಟ್) | 50 |
| 11 | ಮೆ/ಎ.ಡಿ.ಎಲ್. & ಕಂಪನಿ ಜನರಲ್ ಫ್ರೂಟ್ಸ್ ಸಪ್ಲಾಯರ್ಸ್ ಬೀದರ (ಫ್ರುಟ್) | 53 |
| 12 | ಮೆ/ನ್ಯೂ ಕರ್ನಾಟಕ ಫ್ರೂಟ್ಸ್ ಕಮೀಷನ್ ಎಜೆಂಟ್ ಬೀದರ (ಫ್ರುಟ್) | 51 |
| 13 | ಮೆ/ಮಿಲಾಪ ಫ್ರೂಟ್ಸ್ ಕಂ. ಬೀದರ (ಫ್ರುಟ್) | 56 |
| 14 | ಮೆ/ವಾಹೇದ ಟ್ರೇಡಿಂಗ್ ಕಂಪನಿ ಬೀದರ | 72 |
| 15 | ಮೆ/ಅಬ್ದುಲ ಗಫೂರ್ ತರಕಾರಿ ಕಮೀಷನ್ ಎಜೆಂಟ್ | 70 |
| 16 | ಮೆ/ಎ.ಎಚ್. ಟ್ರೇಡರ್ಸ್,ಬೀದರ | 71 |
| 17 | ಮೆ/ಎ.ಆರ್.ಸಿ.ಕಮೀಷನ್ ಎಜೆಂಟ್ ಬೀದರ | 59 |
| 18 | ಮೆ/ಮದಿನಾ ಡಿಲ್ಯಾಕ್ಸ್ ಎಂ.ಡಿ. & ಕಂಪನಿ, ಟ್ರೇ. ಕಂ. ಬೀದರ | 64 |
| 19 | ಮೆ/ಬಾಬುಮಿಯ್ಯಾ & ಕಂಪನಿ ಬೀದರ | 67 |
| 20 | ಮೆ/ಖುಷಿ ಟ್ರೇಡರ್ಸ್ ಬೀದರ (ಎಸ್.ಸಿ.) | 16 |
| 21 | ಮೆ/ಪ್ರೇಮ ಟ್ರೇಡಿಂಗ್ ಕಂಪನಿ ಬೀದರ (ಎಸ್.ಸಿ.) | 60 |
| 22 | ಮೆ/ಜೈ ಮಾತಾ ಟ್ರೇಡಿಂಗ್ ಕಂಪನಿ ಬೀದರ (ಎಸ್.ಟಿ.) | 61 |
| 23 | ಮೆ/ಕನಕ ಸಿಂದೆ ಎಂಟರಪ್ರೈಸಸ್ ಬೀದರ (ಎಸ್.ಸಿ) | 68 |

ಕ.ಟಿ.ನಿರ್ದೇಶಕರಿಂದ ಅನುಮೋದಿತವಾಗಿದೆ.

(ಎಂ.ಎಸ್.ರಾಜಶ್ರೀ)
ಹೆಚ್ಚುವರಿ ನಿರ್ದೇಶಕರು (ಯೋಜನೆ)

1. ಅಧ್ಯಕ್ಷರು/ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೀದರ್.
2. ಕಛೇರಿ ಪ್ರತಿ.

21/1/2020

21/1/2020

22/1/2020